# IN THE NATIONAL LOK ADALTH

## CIVIL JUDGE AND JMFC COURT, DEVADURGA

ಒ.ಎಸ್ **44/2026**

**ಪ್ರಕರಣವನ್ನು ಇಂದು ದಿ:11-07-2026** ರಂದು ರಾಷ್ಟ್ರೀಯ ಲೋಕ ಆದಾಲತ್ ನಲ್ಲಿ **ಕರೆಯಲಾಯಿತು.**

ಶ್ರೀಮತಿ ಜಿ.ಬಿ ವಾದಿ ಪರ **ವಕೀಲರು**, ಹಾಗೂ ಶ್ರೀ ಎ.ಡಿ.ಎಮ್. ಪ್ರತಿವಾದಿ ಪರ ವಕೀಲರು, ವಾದಿ ಮತ್ತು ಪ್ರತಿವಾದಿ **ಹಾಜರಿರುತ್ತಾರೆ.**

ವಾದಿಯರ ಮತ್ತು ಪ್ರತಿವಾದಿ **ಪರ** ವಕೀಲರು ರಾಜಿ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ರಾಜಿ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿ ಗ್ರಾಮದ ಹಿರಿಯರ ಮತ್ತು ಹಿತೈಷಿಗಳ ಸಮಕ್ಷಮದಲ್ಲಿ ರಾಜಿ ಮಾಡಿಕೊಂಡಿದ್ದು, ಅದರಂತೆ ದಾವಾ ಅನುಸೂಚಿ ಆಸ್ತಿಯು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು, ಗಬ್ಬೂರು ಗ್ರಾಮದ ವ್ಯಾಪ್ತಿಯಲ್ಲಿರುವ ಸರ್ವೆ ನಂ.**366/★/1** ರಲ್ಲಿ **09-01 ಗುಂಟೆ** ಇದ್ದು, ಸದರಿ ಆಸ್ತಿಯಲ್ಲಿ **08-01** ಗುಂಟೆ ಜಮೀನಿಗೆ ಪ್ರತಿವಾದಿ ಮಾಲೀಕರು ಹಾಗೂ ಕಬ್ಜಾದಾರರು ಆಗಿರುವುದಾಗಿ ವಾದಿ ಒಪ್ಪಿಕೊಂಡಿರುತ್ತಾರೆ.

ದಾವಾ ಅನುಸೂಚಿ ಆಸ್ತಿಯು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು, ಗಬ್ಬೂರು ಗ್ರಾಮದ ವ್ಯಾಪ್ತಿಯಲ್ಲಿರುವ ಸರ್ವೆ ನಂ.**366/★/1** ರಲ್ಲಿ **09-01 ಗುಂಟೆ** ಇದ್ದು, ಸದರಿ ಆಸ್ತಿಯಲ್ಲಿ ಪೂರ್ವ ದಿಕ್ಕಿನ ಕಡೆಗೆ **1-00** ಎಕರೆ ಜಮೀನಿಗೆ ವಾದಿ ಮಾಲೀಕರು ಹಾಗೂ ಕಬ್ಜಾದಾರರು ಆಗಿರುವುದಾಗಿ ಪ್ರತಿವಾದಿ ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಯು ವಾದಿಗೆ ರೂ.**4,50,000/-** ಗಳನ್ನು ಪಾವತಿಸಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ಆ ಬಗ್ಗೆ ವಾದಿ ಮತ್ತು ಪ್ರತಿವಾದಿ ತಕರಾರು ಇರುವುದಿಲ್ಲವೆಂದು ಪ್ರತಿವಾದಿ ಒಪ್ಪಿದ್ದು, ವಾದಿ-ಪ್ರತಿವಾದಿ ಹಾಜರು ಮಾಡಿದ ರಾಜಿ ಪತ್ರವನ್ನು ಪುರಸ್ಕರಿಸಿ ರಾಜೀ ರೀತ್ಯಾ ದಾವೆಯು ಡಿಕ್ರಿ ಆದೇಶ ಮಾಡಲು ಕೋರಿರುತ್ತಾರೆ. ರಾಜಿ ಅರ್ಜಿಯೊಂದಿಗೆ ವಾದಿ **ಮತ್ತು** ಪ್ರತಿವಾದಿ **ಗುರುತಿನ ಬಗ್ಗೆ ಆಧಾರ ಕಾರ್ಡಗಳನ್ನು ಭಾವಚಿತ್ರಗಳೊಂದಿಗ ಸಲ್ಲಿಸಿರುತ್ತಾರೆ.**

ರಾಜಿ ಪತ್ರ ವನ್ನು ಪರಿಶೀಲಿಸಲಾಯಿತು.

ರಾಜಿ ಪತ್ರದಲ್ಲಿರುವ ವಿಷಯಗಳನ್ನು ಉಭಯ ಪಕ್ಷಗಾರರಿಗೆ ಓದಿ ತಿಳಿಸಲಾಯಿತು. ಉಭಯ ಪಕ್ಷಗಾರರು ರಾಜಿ ಪತ್ರದಲ್ಲಿರುವ ವಿಷಯಗಳಿಗೆ ತಮ್ಮ ಯಾವುದೇ ತಕರಾರು ಇಲ್ಲವೆಂದು ಒಪ್ಪಿ ಸಹಿ ಮಾಡಿರುವುದಾಗಿ ಮತ್ತು ಅದಕ್ಕೆ ಸಮ್ಮತಿ ಇರುವುದಾಗಿ ತಿಳಿಸಿರುತ್ತಾರೆ. ರಾಜಿಯು ಉಭಯ ಪಕ್ಷಗಾರರಿಗೆ ಅನುಕೂಲಕರವಾಗಿರುತ್ತದೆ. ಆದ್ದರಿಂದ ಈ ಕೆಳಗಿನಂತೆ:-

-: ಆದೇಶ :-

ಉಭಯ ಪಕ್ಷಗಾರರು ಸಲ್ಲಿಸಿದ ರಾಜಿ ಪತ್ರವನ್ನು ಪುರಸ್ಕರಿಸಿ ದಾವೆಯನ್ನು ವಿಲೇವಾರಿ ಮಾಡಲಾಯಿತು.

ಅದರಂತೆ ಡಿಕ್ರಿಯನ್ನು ತಯಾರಿಸತಕ್ಕದ್ದು.

| | |
|---|---|
| ಸಹಿ/- | ಸಹಿ/- |
| 2ನೇ ಸಂಧಾನಕಾರರು<br>ವಕೀಲರು | 1ನೇ ಸಂಧಾನಕಾರರು<br>ಸಿವಿಲ್ ನ್ಯಾಯಾಧೀಶರು,<br>ದೇವದುರ್ಗ |